# UNIVERSITY OF MYSORE *Alumni Association®*

E-4, Professors' Quarters
opp. Fire Brigade, Saraswathipuram
Mysore – 570 009, INDIA

Mobile: 8123087119
Website: www.umaa.in
Email: secretaryumaa2018@gmail.com


## One – day Workshop




**On 15th October 2022 an One Day Workshop on 'Selection of Multi-disciplinary Courses under National Education Policy – 2020' was organized by University of Mysore Alumni Association (UMAA) to the students of Manasagangotri at Vijnana Bhavana in association with Forum of Former Vice Chancellors of Karnataka. The workshop was inaugurated by Prof. S.N. Hegde, President, UMAA and Former Vice Chancellor University of Mysore. Prof. Hegde spoke on the selection of multi-disciplinary courses under National Education Policy – 2020. The Programme was presided over by Prof. G. Hemantha Kumar, Vice Chancellor, University of Mysore. Guest of honor was Prof. K.S. Rangappa, President, Forum of Former Vice Chancellors**

For University of Mysore Alumni Association (UMAA) (R)

President

UNIVERSITY OF MYSORE *Alumni Association*®
E-4, Professors' Quarters
opp. Fire Brigade, Saraswathipuram
Mysore – 570 009, INDIA
Mobile: 8123087119
Website: www.umaa.in
Email: secretaryumaa2018@gmail.com



of Karnataka and Former Vice Chancellor of KSOU and University of Mysore.

Prof. N.S. Ramegowda, Former Vice Chancellor, Karnataka State Open University and Prof. S. Srikantaswamy, Secretary, UMAA and Prof. K.N. Amruthesh, Joint Secretary, UMAA were present during the occasion.

For University of Mysore Alumni Association (UMAA) (R)

President

# UNIVERSITY OF MYSORE ALUMNI ASSOCIATION®

E4, Professor's Quarters, Saraswathipuram, Mysore

*Cordially invite you to*

## Oriantation Programme

## The Selection of Multi Disciplinary Courses under National Educational Policy -2020

Date: 15-10-2022
11-00 AM

Venue: vijnana bhavana
Manasagangotri Mysuru

**Inauguration by**

**Prof. G.Hemanth Kumar**

*Vice chancellor University of Mysore.*

**Presided by**

**Prof. S.N. Hegde**

*Former Vice chancellor University of Mysore*

*And President, Umaa.*

**Guest of Honour**

**Prof. K.S.Rangappa**

*Former Vice chancellor KSOU and University of Mysore*

**Prof. N.S.Rame gowda**

*Former Vice chancellor KSOU and University of Mysore*

**Prof S.Srikantaswamy**

*Secretary, UMAA*

ಮೈಸೂರು ಮಿತ್ರ ಭಾನುವಾರ 16 ಅಕ್ಟೋಬರ್ 2022

## ಶಿಕ್ಷಕರು, ವಿದ್ಯಾರ್ಥಿಗಳ ಕಾರ್ಯಾಗಾರಕ್ಕೆ ಚಾಲನೆ

# ಎನ್‌ಇಪಿ ಅನುಷ್ಠಾನ ಸಂಬಂಧ ಸರ್ಕಾರಕ್ಕೆ ಶೀಘ್ರ ಸಲಹಾ ವರದಿ

### ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ

ಮೈಸೂರು,ಅ.15(ಆರ್‌ಕೆಬಿ)– ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಒಳ್ಳೆಯ ಯೋಜನೆ. ಹಾಗಾಗಿ, ಇದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಲಾಗುವುದು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತಿಳಿಸಿದರು.

ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ, ಮೈಸೂರು ವಿವಿಯ ಅಲುಮ್ನಿ ಅಸೋಸಿಯೇಷನ್ ವತಿಯಿಂದ ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಶನಿವಾರ ಏರ್ಪಡಿಸಿದ್ದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತ ನಾಡಿದರು. ನಮ್ಮ ದೇಶಕ್ಕೆ ಎನ್‌ಇಪಿ ಒಂದು ಉತ್ತಮ ವ್ಯವಸ್ಥೆ. ಇದರ ಅನುಷ್ಠಾನ ಆಗಿ ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಕೊಟ್ಟಿಲ್ಲ. ಹಲವು ವಿವಿಗಳಲ್ಲಿ ಅಧ್ಯಾಪಕರ ಕೊರತೆ ಇದೆ. ಹಾಗಾಗಿ ನಮ್ಮ ವೇದಿಕೆ ಎನ್‌ಇಪಿ ಅನುಷ್ಠಾನ ಕುರಿತಂತೆ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರಿಗಾಗಿ ಕಾರ್ಯಾಗಾರ ಏರ್ಪಡಿಸಿದ್ದಾಗಿ ತಿಳಿಸಿದರು.

ಈ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದಾರೆ. ಅವರ ಅಭಿಪ್ರಾಯ ಪಡೆದು ಸರ್ಕಾರಕ್ಕೆ ವರದಿ ನೀಡಲಿದ್ದೇವೆ. ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡರು ವರದಿ ತಯಾರಿಸಿ, ಸರ್ಕಾರಕ್ಕೆ ನೀಡಲಿದ್ದಾರೆ. ಸಂಶೋಧನೆ, ಶಿಕ್ಷಣದ ಗುಣಮಟ್ಟ ಸೇರಿದಂತೆ ಇನ್ನಿತರೆ ವಿಚಾರಗಳ ಬಗ್ಗೆಯೂ ನಮ್ಮ ವೇದಿಕೆ ಚರ್ಚಿಸಲಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾತನಾಡಿ, 2019ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಕಾರ್ಯಾಗಾರ ಏರ್ಪಡಿಸಿ, ಪ್ರೊ.ಕಸ್ತೂರಿ ರಂಗನ್ ಅವರನ್ನು ಕರೆಸಲಾಗಿತ್ತು. ಪದವಿಯಲ್ಲಿದ್ದ ಮೂರು ವಿಷಯದಿಂದ ಎರಡು ವಿಷಯಕ್ಕೆ ಇಳಿಯುವುದು ಸವಾಲಿನ ವಿಷಯ ಆಗಿತ್ತು. ಎನ್‌ಇಪಿ ಮುಖ್ಯ ಉದ್ದೇಶವೆಂದರೆ ವಿಶ್ವದ ಅತ್ಯುನ್ನತ 100 ರೊಳಗೆ ನಮ್ಮ ದೇಶದ ವಿವಿಗಳು ಬರಬೇಕು. ಗುಣಮಟ್ಟದ ಹಾಗೂ ಮೌಲ್ಯಯುತ ಶಿಕ್ಷಣ ನೀಡಬೇಕು. ಕೌಶಲ್ಯಗಳನ್ನು ತಿಳಿಸಬೇಕು. ಒಂದೊಳ್ಳೆ ಯೋಜನೆ ಇದು. ಬಹುಶಿಸ್ತೀಯ ಅಂಶಗಳು ಇದರಲ್ಲಿ ಅಡಕವಾಗಿದೆ ಎಂದು ಹೇಳಿದರು.

ಬೇರೆ ಕೋರ್ಸ್ ಓದುವುದು ಕಷ್ಟ ಎಂಬ ವಿದ್ಯಾರ್ಥಿಗಳಲ್ಲಿರುವ ಭಾವನೆ ನಿವಾರಣೆ ಮಾಡಬೇಕು. ಸರ್ಕಾರ ಪಾಲಿಸಿ ಅನುಷ್ಠಾನಕ್ಕೆ ತಂದರೆ ಸಾಲದು. ಅದನ್ನು ಸಮರ್ಥವಾಗಿ ಅನುಷ್ಠಾನಕ್ಕೆ ತರಬೇಕು. ಶೇ.1.5 ಜಿಡಿಪಿಯನ್ನು ಇದೀಗ ಸರ್ಕಾರ ನೀಡುತ್ತಿದೆ. ಅದು ಶೇ.6 ರಷ್ಟು ಆಗಬೇಕು. ಕಾಲೇಜುಗಳಿಗೆ ಸಂಪನ್ಮೂಲ ಹಾಗೂ ಸೌಕರ್ಯಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಮಾತನಾಡಿ, ಇದು ಎರಡು ವರ್ಷದ ಪಾಲಿಸಿ ಅಲ್ಲ. 15 ವರ್ಷದ ಪಾಲಿಸಿ. ಇದನ್ನು ಎಲ್ಲಾ ಕಾಲೇಜುಗಳಲ್ಲಿ ಅನುಷ್ಠಾನಕ್ಕೆ ತರಬೇಕು. ಇದು ಒಳ್ಳೆಯ ಯೋಜನೆ. ಆದರೆ ಅದಕ್ಕೆ ತಯಾರಿ ಆಗಿದೆಯಾ? ರಾಜಕೀಯ ಧೋರಣೆ ಶಿಕ್ಷಣ ಕ್ಷೇತ್ರಕ್ಕೆ ಕಾಲಿಡಬಾರದು. ಈ ಯೋಜನೆ ಅನುಷ್ಠಾನಕ್ಕೆ ಬೇಕಾದ ಶಿಕ್ಷಕರು ಎಲ್ಲಿದ್ದಾರೆ? ಸೌಕರ್ಯ ಎಲ್ಲಿದೆ? ಇದನ್ನೆಲ್ಲ ಸರ್ಕಾರ ಮನಗಾಣಬೇಕು. ಇಂತಹ ಕಾರ್ಯಾಗಾರ ಹೆಚ್ಚು ನಡೆಯಬೇಕು. ಕಲಾ, ವಿಜ್ಞಾನ, ವಾಣಿಜ್ಯ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ನೀಡಬೇಕು ಎಂದು ಸಲಹೆ ನೀಡಿದರು.

ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಮಾತನಾಡಿ, ಈ ಕಾರ್ಯಾಗಾರಕ್ಕೆ ಬಂದಿರುವ ಅಧ್ಯಾಪಕರು, ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಇತರರಿಗೆ ಎನ್‌ಇಪಿ ಕುರಿತ ವಿಷಯ ವಿನಿಮಯ ಮಾಡಿಕೊಳ್ಳಬೇಕು. ಈ ಕಾರ್ಯಾಗಾರದ ಬಳಿಕ ವರದಿ ತಯಾರಿಸಿ ಸರ್ಕಾರಕ್ಕೆ ನೀಡಲಿದ್ದೇವೆ ಎಂದು ಹೇಳಿದರು. ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್.ಶ್ರೀಕಂಠಸ್ವಾಮಿ, ಪ್ರೊ.ಸಿ.ನಾಗಣ್ಣ ಇನ್ನಿತರರು ಉಪಸ್ಥಿತರಿದ್ದರು.



ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ, ಮೈಸೂರು ವಿವಿಯ ಅಲುಮ್ನಿ ಅಸೋಸಿಯೇಷನ್ ಮೈಸೂರಿನ ವಿಜ್ಞಾನಭವನದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಕಾರ್ಯಾಗಾರವನ್ನು ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಉದ್ಘಾಟಿಸಿದರು. ಚಿತ್ರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಎನ್.ಎಸ್.ರಾಮೇಗೌಡ, ಅಲುಮ್ನಿ ಅಸೋಸಿಯೇಷನ್ ಕಾರ್ಯದರ್ಶಿ ಪ್ರೊ.ಎಸ್.ಶ್ರೀಕಂಠಸ್ವಾಮಿ, ಪ್ರೊ.ಸಿ.ನಾಗಣ್ಣ ಅವರನ್ನು ಕಾಣಬಹುದು.